

‘ಶ್ರೀ ಮಂಜುನಾಥೇಶ್ವರ ಸಂಸ್ಕೃತಿ ಸಂಶೋಧನಾ ಪ್ರತಿಷ್ಠಾನ’ ಎನ್ನುವ ಹೆಸರನ್ನು ವೀರೇಂದ್ರ ಹೆಗ್ಗಡೆ ಅವರಿಗೆ ಸೂಚಿಸಿದ್ದು ಕುವೆಂಪು.

# ಸಾಹಿತ್ಯದ ವಿಶ್ವರೂಪ ದರ್ಶನ ಸಂಸ್ಕೃತಿ–ಸಂಶೋಧನೆಯ ತಾಣ

‘ಶ್ರೀ ಮಂಜುನಾಥೇಶ್ವರ ಸಂಸ್ಕೃತಿ ಸಂಶೋಧನಾ ಪ್ರತಿಷ್ಠಾನ’ ಧರ್ಮಸ್ಥಳಕ್ಕೆ ಸಾಂಸ್ಕೃತಿಕ ಮಹತ್ವ ಕಲ್ಪಿಸಿರುವ ವಿಶಿಷ್ಟ ಸಂಗ್ರಹಾಲಯ. ಬರವಣಿಗೆಯ ಹಲಬಗೆಯ ಪ್ರಾಚೀನ ರೂಪಗಳ ಸಂಗ್ರಹಗಳು ಇಲ್ಲಿದ್ದು, ಕನ್ನಡದ ಪ್ರಾಚೀನ ಕಾವ್ಯಗಳ ಹಸ್ತಪ್ರತಿಗಳನ್ನು ಪ್ರತಿಷ್ಠಾನದಲ್ಲಿ ಕಾಣಬಹುದು. ಸಾಹಿತ್ಯದ ವಿದ್ಯಾರ್ಥಿಗಳು ಮತ್ತು ಸಂಶೋಧಕರ ಪಾಲಿಗೆ ಈ ಪ್ರತಿಷ್ಠಾನ ಅಪಾರ ಜ್ಞಾನ ಹಾಗೂ ಅಗಣಿತ ಮಾಹಿತಿಯ ಕಣಜ.

**ಆರ್‌. ನಾಭಿರಾಜ ಪೂವಣಿ**

ಎಂಟು ಶತಮಾನಗಳ ಭವ್ಯ ಇತಿಹಾಸ ಮತ್ತು ಪರಂಪರೆಯನ್ನು ಹೊಂದಿರುವ ಧರ್ಮಸ್ಥಳ ನಾಡಿನ ಪ್ರಸಿದ್ಧ ಧಾರ್ಮಿಕ ಕ್ಷೇತ್ರಗಳಲ್ಲೊಂದು. ಧಾರ್ಮಿಕ ಆಯಾಮದ ಜೊತೆಗೆ ಸಾರಸ್ವತ ಆಯಾಮವೂ ಧರ್ಮಸ್ಥಳಕ್ಕಿದೆ. ಆ ಆಯಾಮವನ್ನು ಪರಿಚಯಿಸಿಕೊಳ್ಳಲು ‘ಶ್ರೀ ಮಂಜುನಾಥೇಶ್ವರ ಸಂಸ್ಕೃತಿ ಸಂಶೋಧನಾ ಪ್ರತಿಷ್ಠಾನ’ಕ್ಕೆ ಭೇಟಿ ಕೊಡಬೇಕು.

ವಿಶಿಷ್ಟ ಸಂಶೋಧನಾ ಸಂಸ್ಥೆಯಾದ ‘ಶ್ರೀ ಮಂಜುನಾಥೇಶ್ವರ ಸಂಸ್ಕೃತಿ ಸಂಶೋಧನಾ ಪ್ರತಿಷ್ಠಾನ’ ಅಮೂಲ್ಯ ಹಸ್ತಪ್ರತಿಗಳು ಹಾಗೂ ಮುದ್ರಿತ ಪುಸ್ತಕಗಳ ಅಪೂರ್ವ ಸಂಗ್ರಹ. ಪಂಪನ ‘ಆದಿಪುರಾಣ’, ತುಳು ರಾಮಾಯಣ, ತುಳು ಮಹಾಭಾರತ, ಕವಿ ಪದ್ಮನಾಭ ವಿರಚಿತ ‘ವೇಣೂರು ಭುಜಬಲಿ ಚರಿತೆ’, ಕವಿ ಮುದ್ದಣ ವಿರಚಿತ ‘ಶ್ರೀ ರಾಮಾಶ್ವಮೇಧಂ’, ‘ಬಸವ ಪುರಾಣ’ ಮೊದಲಾದ ಅಮೂಲ್ಯ ಹಸ್ತಪ್ರತಿಗಳು ಈ ಸಂಗ್ರಹದಲ್ಲಿವೆ.

ವಿವಿಧ ಭಾಷೆಗಳ ಪ್ರಾಚೀನ ಪತ್ರಿಕೆಗಳ ಅಪೂರ್ವ ಸಂಗ್ರಹವನ್ನು ಪ್ರತಿಷ್ಠಾನದಲ್ಲಿ ಕಾಣಬಹುದು. ಕನ್ನಡದ ಮೊದಲ ಪತ್ರಿಕೆ ‘ಮಂಗಳೂರು ಸಮಾಚಾರ’ (1843), ದಕ್ಷಿಣಕನ್ನಡ ಜಿಲ್ಲಾ ಗೆಜೆಟ್ (1876), ಮೈಸೂರು ಸ್ಟಾರ್ (1883), ನವಯುಗ (1952), ಮಹಾತ್ಮ ಗಾಂಧಿ ಅವರ ‘ಯಂಗ್ ಇಂಡಿಯಾ’ ಸೇರಿದಂತೆ ಹಲವಾರು ಚಾರಿತ್ರಿಕ ಪತ್ರಿಕೆಗಳ ಸಂಗ್ರಹವಿದೆ.

ಹಸ್ತಪ್ರತಿಗಳ ಹಲವು ರೂಪಗಳನ್ನು ಇಲ್ಲಿ ಕಾಣಬಹುದು. ತಾಡೋಲೆ, ಕಾಗದ, ಭೂರ್ಜಪತ್ರ, ಶಿಲೆ, ಸ್ಫಟಿಕ, ಸುಟ್ಟ ಮಣ್ಣಿನ ಪಾತ್ರೆ, ಚಿನ್ನ, ಬೆಳ್ಳಿ, ತಾಮ್ರ ಮೊದಲಾದ ರೂಪಗಳಲ್ಲಿರುವ ಹಸ್ತಪ್ರತಿಗಳನ್ನು ಪ್ರತಿಷ್ಠಾನದ ಸಂಗ್ರಹದಲ್ಲಿ ನೋಡಬಹುದು. ಸಂಸ್ಕೃತಿಯ ಕೋಶಗಳಾದ ಹಸ್ತಪ್ರತಿಗಳು ನಮ್ಮ ಪೂರ್ವಜರ ಅಪೂರ್ವ ಜ್ಞಾನ, ವಿಜ್ಞಾನ, ಶಾಸ್ತ್ರ, ಆಚಾರ ವಿಚಾರಗಳು, ಜೀವನಶೈಲಿ, ಸಾಮಾಜಿಕ, ರಾಜಕೀಯ ಹಾಗೂ ಧಾರ್ಮಿಕ ಸ್ಥಿತಿಗತಿಗಳನ್ನು ತಿಳಿಸುತ್ತವೆ.



ಸಂರಕ್ಷಿಸಿದ ಹಸ್ತಪ್ರತಿ